# ಸ್ವಾಮಿ ಶಾರದಾನಂದರ ನೆನಪುಗಳು-೩

–ಸ್ವಾಮಿ ನಿಖಿಲಾನಂದ

ಅನುವಾದ: ಡಾ. ಇ. ವಸಂತಕುಮಾರ್

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

**ತ**ಮ್ಮ ಆರೋಗ್ಯ ಸ್ವಲ್ಪ ಸುಧಾರಿಸಿದೆ ಎಂದೆನಿಸಿದಾಗ ಸ್ವಾಮಿಗಳು ಪುರಿಗೆ ಹೋಗಲು ನಿರ್ಧರಿಸಿದರು. ಈ ಬಾರಿ ತಂಡದ ಯೋಗಕ್ಷೇಮವನ್ನು ನಾನು ನೋಡಿಕೊಳ್ಳಬೇಕೆಂದು ಅವರು ನನಗೆ ಹೇಳಿದರು. ಹೊರಡಬೇಕಾದ ದಿನದಂದು ರೈಲನ್ನು ಹತ್ತಲು ನಾವು ಹೌರಾ ನಿಲ್ದಾಣಕ್ಕೆ ಹೋದೆವು. ತಂಡದಲ್ಲಿ ಮೂವರು ಸ್ತ್ರೀಯರಿದ್ದರು. ನಮ್ಮನ್ನು ಬೀಳ್ಕೊಡಲು ನಿಲ್ದಾಣಕ್ಕೆ ಅನೇಕ ಸ್ವಾಮಿಗಳು ಮತ್ತು ಭಕ್ತರು ಬಂದಿದ್ದರೆಂದು ನನ್ನ ನೆನಪು. ರೈಲಿನ ಮಧ್ಯಭಾಗದಲ್ಲಿದ್ದ ಎರಡನೇ ದರ್ಜೆಯ ಡಬ್ಬಿಯಲ್ಲಿ ಸ್ವಾಮಿಗಳ ಹಾಸಿಗೆಯನ್ನು ಸಿದ್ಧಪಡಿಸುವುದರಲ್ಲಿ ನಾನು ನಿರತನಾಗಿದ್ದೆ. ಸ್ತ್ರೀಯರಿಗಾಗಿ ಮೀಸಲಾದ ಡಬ್ಬಿ ಎಂಜಿನ್ನಿನ ಹತ್ತಿರವಿತ್ತು ಮತ್ತು ನಮ್ಮ ಡಬ್ಬಿ ರೈಲಿನ ಕೊನೆಯ ಭಾಗದಲ್ಲಿತ್ತು. ಹೆಂಗಸರ ಬಟ್ಟೆಯ ಬಗ್ಗೆ ಬನಾರಸ್‌ನಲ್ಲಿ ನಡೆದ ಘಟನೆಯನ್ನು ನೆನಪಿಸಿಕೊಂಡು, ನಾವು ರೈಲನ್ನು ಹತ್ತಿದಾಗ, ನಮ್ಮೊಂದಿಗೆ ಪ್ರಯಾಣ ಮಾಡಲು ಹೊರಟಿದ್ದ ಹೆಂಗಸರನ್ನು ವಿಚಾರಿಸಿಕೊಳ್ಳುವ ಗೊಡವೆಗೆ ನಾನು ಹೋಗಲೇ ಇಲ್ಲ. ಕೆಲವು ಭಕ್ತರು ಅವರನ್ನು ಅವರ ಡಬ್ಬಿಗೆ ಕರೆದುಕೊಂಡು ಹೋದರು. ರಾತ್ರಿ ಹತ್ತು ಗಂಟೆಗೆ ರೈಲು ಖರಗ್‌ಪುರದಲ್ಲಿ ನಿಂತಿತು. ಸ್ವಾಮಿಗಳಿಗೆ ಏನಾದರೂ ಬೇಕೆ ಎಂದು ವಿಚಾರಿಸಲು ನಾನು ಅವರ ಡಬ್ಬಿಗೆ ಓಡಿಹೋದೆ. ತಮ್ಮ ಗಂಭೀರ ಧ್ವನಿಯಿಂದ ತಮಗೇನೂ ಬೇಕಾಗಿಲ್ಲವೆಂದು ಉತ್ತರವಿತ್ತರು. ಮುಂಜಾನೆ ರೈಲು ಭುವನೇಶ್ವರದಲ್ಲಿ ನಿಂತಿತು. ಅಲ್ಲಿನ ಆಶ್ರಮದ ಅನೇಕ ಸ್ವಾಮಿಗಳು ನಿಲ್ದಾಣಕ್ಕೆ ಬಂದರು. ನಾನು, ಸ್ವಾಮಿಗಳಿಗೆ ಏನಾದರೂ ಬೇಕೇ ಎಂದು ತಿಳಿಯಲು ಮತ್ತೆ ಅವರ ಡಬ್ಬಿಗೆ ಓಡಿಹೋದೆ. ಮಹಿಳಾ ಭಕ್ತರು ಇದ್ದ ಗಾಡಿಗೆ ಹೋಗಿ ಅವರಿಗೆ ಏನಾದರೂ ಬೇಕಾಗಿದೆಯೇ ಎಂದು ವಿಚಾರಿಸುವಂತೆ ಸ್ವಾಮಿಗಳು ಸ್ವಲ್ಪ ಗಡುಸಾಗಿಯೇ ನನಗೆ ಹೇಳಿದರು. ನಾನು ಅವರಿಗೆಲ್ಲ ಸ್ವಲ್ಪ ನೀರು ತಂದುಕೊಟ್ಟೆ. ಕೊನೆಗೆ ರೈಲು ಬೆಳಗ್ಗೆ ಸುಮಾರು ಹತ್ತು ಗಂಟೆಯ ಹೊತ್ತಿಗೆ ಪುರಿಯನ್ನು ತಲುಪಿತು.

ನಮ್ಮನ್ನು ಭೇಟಿ ಮಾಡಲು ಸ್ವಾಮಿ ಶಂಕರಾನಂದರು ಮತ್ತು ಕೆಲವು ಭಕ್ತರು ನಿಲ್ದಾಣದಲ್ಲಿ ಕಾದಿದ್ದರು. ನಾನು ಸ್ವಾಮಿಗಳ ಹಾಸಿಗೆಯನ್ನು ತೆಗೆದು ಮಡಿಸಿಟ್ಟು, ಪದಾರ್ಥಗಳನ್ನೆಲ್ಲ ಜೋಡಿಸಿ ಇಟ್ಟೆ. ಸ್ವಾಮಿ ಶಂಕರಾನಂದರು ಮಹಿಳಾ ಭಕ್ತರ ಗಾಡಿಗೆ ಹೋಗಿ ಅವರ ಸಾಮಾನುಗಳನ್ನು ಇಳಿಸಲು ಸಹಾಯ ಮಾಡಿದರು. ಸ್ವಾಮಿ ಶಾರದಾನಂದರು, ಸ್ವಾಮಿ ಶಂಕರಾನಂದರು ಮತ್ತು ಮಹಿಳಾ ಭಕ್ತರು ತಂಗುವ ವ್ಯವಸ್ಥೆಯಿದ್ದ 'ಶಶಿನಿಕೇತನ' ನಿವಾಸಕ್ಕೆ ಒಂದು ಕಾರಿನಲ್ಲಿ ತೆರಳಿದರೆಂದು ನನ್ನ ನೆನಪು. ಉಳಿದ ನಾವೆಲ್ಲ ನಮ್ಮ ಗಂಟುಮೂಟೆಗಳೊಂದಿಗೆ ಆ ಮನೆಗೆ ಒಂದು ಕುದುರೆ ಗಾಡಿಯಲ್ಲಿ ಹೋದೆವು. ಸ್ವಾಮಿ ಶಾರದಾನಂದರು ಒಂದು ದೊಡ್ಡ ಕೊಠಡಿಯಲ್ಲಿ ಕಾಫಿಯನ್ನು ಕುಡಿಯುತ್ತಾ ಅನೇಕ ಭಕ್ತರೊಂದಿಗೆ ಕುಳಿತಿದ್ದುದನ್ನು ಅಲ್ಲಿ ನೋಡಿದೆ. ನಾನು ಅವರ ಪದಾರ್ಥಗಳನ್ನು ತೆಗೆದುಕೊಂಡು ಹೋಗಿ ಎರಡನೇ ಮಹಡಿಯಲ್ಲಿದ್ದ ಅವರ ಕೊಠಡಿಯಲ್ಲಿಟ್ಟು, ಸ್ವಾಮಿಗಳೊಂದಿಗೆ ಬಹಳ ಕಾಲ ಸಂಪರ್ಕವಿದ್ದ ಮತ್ತೊಬ್ಬ ಸ್ವಾಮಿಗಳ ಮಾರ್ಗದರ್ಶನದಂತೆ, ಪೆಟ್ಟಿಗೆಗಳನ್ನು ಬಿಚ್ಚಿ ಅವರ ಹಾಸಿಗೆಯನ್ನು ಸಿದ್ಧಪಡಿಸಿದೆ. ಈ ವಿಷಯಗಳಲ್ಲಿ ನಾನು ಅನುಭವವಿಲ್ಲದ ಹೊಸಬನಾದುದರಿಂದ, ರಾತ್ರಿ ಬಳಕೆಯ ದೊಡ್ಡ ಹಾಸಿಗೆಯನ್ನು ಒಂದು ದೊಡ್ಡ ಮಂಚದ ಮೇಲೆ ಮತ್ತು ಹಗಲು ಅವರು ಉಪಯೋಗಿಸುವ ಸಣ್ಣ ಹಾಸಿಗೆಯನ್ನು ನೆಲದ ಮೇಲೆ ಅಣಿಮಾಡುವಂತೆ ನನಗೆ ಆ ಸ್ವಾಮಿಗಳು ಹೇಳಿದರು. ಎಲ್ಲವೂ ಸಿದ್ಧವಾದ ಮೇಲೆ ನಾನು ಕೆಳಗೆ ಬಂದು, ಅವರ ಕೋಣೆ ಸಿದ್ಧವಾಗಿರುವುದಾಗಿ ಸ್ವಾಮಿಗಳಿಗೆ ತಿಳಿಸಿದೆ. ಅವರೊಂದಿಗೆ ನಾವೆಲ್ಲರೂ ಆ ಕೋಣೆಗೆ ಬಂದೆವು.

ಗೃಹಸ್ಥರು ಉಪಯೋಗಿಸುವ ಮಂಚದ ಮೇಲೆ ಅವರ ಹಾಸಿಗೆಯನ್ನು ಸಿದ್ಧಪಡಿಸಿದುದಕ್ಕಾಗಿ ಅವರು ನನ್ನನ್ನು ವಿನಾಕಾರಣ ಬೈದರು. ಅವರ ಕೋಪ ಏರಿ, ಮುಖ ಮತ್ತು ಕಣ್ಣುಗಳು ಅದನ್ನು ತೋರಿದವು. ಅವರ ಹಾಸಿಗೆಯನ್ನು ಮಂಚದ ಮೇಲೆ ಸಿದ್ಧಪಡಿಸುವಂತೆ ನನಗೆ ಹೇಳಿದವರು ಯಾರೆಂದು ಕೇಳಿದರು. ನಾನು ಕೆಲವು ನಿಮಿಷಗಳ ಕಾಲ ಮೌನವಾಗಿದ್ದು ನಂತರ, ಅವರು ಅಷ್ಟು ಕೋಪಗೊಂಡಿರುವುದಕ್ಕೆ ಕಾರಣವೇನೆಂದು ಕೇಳಿದೆ. ಅವರ ಹಾಸಿಗೆಯನ್ನು ನೆಲದ ಮೇಲೆ ಹಾಸಲು ನಾನು ಸಂತೋಷವಾಗಿ ಸಿದ್ಧನಿದ್ದೆ. ಆದರೂ ಅವರ ಕೋಪದ ಕಾರಣ ಇದಲ್ಲದೆ, ಬೇರೆ ಏನೋ ಇರಬೇಕೆಂದು ನನಗೆ ಅನ್ನಿಸಿತು. ನಂತರ ಅವರು ಹೇಳಿದರು: "ನನಗೆ ನಿನ್ನ ಮೇಲೆ ಬಹಳ ಕೋಪವಿದೆ. ನಿನ್ನ ವಿಚಿತ್ರ ನಡವಳಿಕೆಯನ್ನು ಕಂಡು ನನಗೆ ಆಶ್ಚರ್ಯವಾಗಿದೆ. ನಾನು ಸ್ತ್ರೀಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳಲಾರೆ. ನಿನಗೇ ಗೊತ್ತಿರುವಂತೆ, ನನಗೆ ಸಂಧಿವಾತ ಇದೆ. ಸಿಯಾಲ್ಡಾ ನಿಲ್ದಾಣದಲ್ಲಿ ನೀನು ಸ್ತ್ರೀಭಕ್ತರನ್ನು ವಿಚಾರಿಸಿಕೊಳ್ಳಲೇ ಇಲ್ಲ. ಇತರ ಭಕ್ತರು ಅವರನ್ನು ಅವರ ಡಬ್ಬಿಗೆ ಕರೆದುಕೊಂಡು ಹೋದರು. ಮತ್ತೆ, ಭುವನೇಶ್ವರದಲ್ಲಿ ನೀನು ನನ್ನ ಬಗ್ಗೆ ಮಾತ್ರ ಚಡಪಡಿಸತೊಡಗಿದೆ. ಆ ಸ್ತ್ರೀಭಕ್ತರಿಗೆ ಏನಾದರೂ ಬೇಕೆ ಎಂದು ವಿಚಾರಿಸಲು ನಿನಗೆ, ನಾನು ಹೇಳಬೇಕಾಯಿತು. ಪುರಿಯಲ್ಲೂ ನೀನು ಅವರೆಡೆಗೆ ಹೋಗಲೇ ಇಲ್ಲ. ಶಂಕರಾನಂದರು ಅವರ ಪೆಟ್ಟಿಗೆಗಳನ್ನು ಇಳಿಸಲು ಸಹಾಯ

ಮಾಡಿದರು. ಇಡೀ ತಂಡದ ಕ್ಷೇಮವನ್ನು ನೋಡಿಕೊಳ್ಳಬೇಕೆಂದು ನಾನು ನಿನಗೆ ಕೊಲ್ಕತಾದಲ್ಲಿಯೇ ಹೇಳಿದ್ದೆ. ನೀನು ಓರ್ವ ಸಂನ್ಯಾಸಿ ಎಂಬ ಕಾರಣದಿಂದ ಉದ್ದೇಶಪೂರ್ವಕವಾಗಿ ಸ್ತ್ರೀಯರಿಂದ ಸಂಪೂರ್ಣವಾಗಿ ದೂರವಿರುವುದಾಗಿದ್ದರೆ, ನೀನು ನನ್ನೊಡನೆ ಬರಬಾರದಾಗಿತ್ತು. ನಿನ್ನ ತಾಯಿ ಮತ್ತು ಸಹೋದರಿಯರೇನಾದರೂ ತಂಡದಲ್ಲಿದ್ದಿದ್ದರೆ ನೀನು ಅವರನ್ನು ಹಾಗೆ ನಿರ್ಲಕ್ಷಿಸುತ್ತಿದ್ದೆಯಾ?" ಅಂದು ನಾನು ಒಂದು ದೊಡ್ಡ ಪಾಠವನ್ನು ಅವರಿಂದ ಕಲಿತೆ. ಸಮಯ, ಸ್ಥಳ ಮತ್ತು ಸಂದರ್ಭಕ್ಕೆ ಅನುಸಾರವಾಗಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸ್ವಾಮಿ ಶಾರದಾನಂದರು ನನಗೆ ತಿಳಿಸಿಕೊಡಲು ಬಯಸಿದ್ದರೆಂದು ತೋರುತ್ತದೆ.

ಪ್ರಸಿದ್ಧವಾದ ಎಮ್ಮಾರ್ ಮಠದ ಮಹಂತರು ತಮ್ಮ ಸೇವಕರೊಂದಿಗೆ ಒಂದು ಸುಂದರವಾದ ತೆರೆದ ಗಾಡಿಯಲ್ಲಿ ನದೀ ತೀರಕ್ಕೆ ನಾಲ್ಕು ಜನ ಭಕ್ತರೊಡನೆ, ಹೋಗುತ್ತಿದ್ದರು. ಎದ್ದುಕಾಣುವ ಹಳದಿ ವಸ್ತ್ರವನ್ನು ಧರಿಸಿ ಅವರು, ಶೋಭಾಯಮಾನವಾಗಿ ಕಾಣುತ್ತಿದ್ದರು. ಆ ಗಾಡಿಯು ಪ್ರತಿನಿತ್ಯ ಮಧ್ಯಾಹ್ನ ನಮ್ಮ ನಿವಾಸದ ಮುಂದೆ ಹಾದುಹೋಗುತ್ತಿದ್ದುದನ್ನು ನೋಡುತ್ತಿದ್ದೆ. ಒಂದು ರಾತ್ರಿ ಊಟವಾದ ನಂತರ ಸ್ವಾಮಿ ಶಾರದಾನಂದರು ಮಲಗಿದ್ದರು. ಅವರಿಗೆ ಗಾಳಿ ಬೀಸುತ್ತ, ನದೀತೀರಕ್ಕೆ ವಾಯುವಿಹಾರಕ್ಕಾಗಿ ವೈಭವಯುತವಾದ ಗಾಡಿಯಲ್ಲಿ ತೆರಳುವುದು ಸಾಧುಗಳಿಗೆ, ಅದರಲ್ಲೂ ಮಠಾಧಿಪತಿಗಳಿಗೆ ಯೋಗ್ಯವೆ ಎಂದು ನಾನು ಕೇಳಿದೆ. ಸ್ವಾಮಿಗಳು ತಕ್ಷಣವೇ ಉದ್ವಿಗ್ನರಾಗಿ, ಕಟುವಾಗಿ ಹೇಳಿದರು: "ಎಮ್ಮಾರ್ ಮಠದ ಮಹಂತರು ಪ್ರತಿಷ್ಠಿತ ವ್ಯಕ್ತಿಗಳು, ತಮ್ಮ ಭಕ್ತರು ಕೊಡುವ ಕೀರ್ತಿ ಗೌರವಗಳನ್ನು ಅರಗಿಸಿಕೊಳ್ಳುವುದು ಸುಲಭವಾದ ಕೆಲಸವೇ?" ಅನಂತರ ನನ್ನ ಕಡೆ ನೋಡುತ್ತಾ ಹೇಳಿದರು: "ನೀನು ಮಾಯಾವತಿಯ ಅದ್ವೈತಾಶ್ರಮಕ್ಕೆ ಸೇರಿದಂದಿನಿಂದ ನಿನ್ನನ್ನು ನಾನು ಗಮನಿಸುತ್ತಿದ್ದೇನೆ. ಮೊದಲು ನೀನು ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ಬರೆದೆ. ನಂತರ ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ ಬಹಳ ಪ್ರಯಾಣ ಮಾಡಿದೆ. ಆಗ ನೀನು ಅನೇಕ ಅರಸರಿಂದಲೂ ಉನ್ನತಾಧಿಕಾರಿಗಳಿಂದಲೂ ಸೇವೆ ಸ್ವೀಕರಿಸಿದೆ. ಇವೆಲ್ಲವೂ ನನ್ನ ಕಿವಿಗೆ ಬಿದ್ದಾಗ ನಾನು ಅಂದುಕೊಂಡೆ: "ಈ ಯುವಕ ಸಂನ್ಯಾಸಿಯಾಗಲು ಇಚ್ಛಿಸಿದ. ಆದರೆ ಪುಸ್ತಕ ಬರೆದು ಮತ್ತು ಉಪನ್ಯಾಸಗಳನ್ನು ಕೊಡಲಾರಂಭಿಸಿ, ತನ್ನ ತ್ಯಾಗ ಜೀವನವನ್ನು ತಪ್ಪಾದ ರೀತಿಯಲ್ಲಿ ಪ್ರಾರಂಭಿಸಿದ್ದಾನೆ. ಜೀವನ ಏನೆಂಬುದನ್ನು ಇವನು ಕಂಡಿಲ್ಲ. ಮೊದಲೇ ಗರ್ವದಿಂದ ಕೊಬ್ಬಿಹೋದರೆ, ಇವನು ಎಂದಿಗೂ ಸಂನ್ಯಾಸಿಯ ಜೀವನವನ್ನು ತಿಳಿಯಲಾರ." ನಂತರ ಅವರು ಮತ್ತೆ ಹೇಳಿದರು: "ನಾವು ಮೊದಲು ವೈರಾಗ್ಯ ಮತ್ತು ತಪಸ್ಸನ್ನು ಅಭ್ಯಾಸಮಾಡಿ ನಂತರ ಪುಸ್ತಕಗಳನ್ನು ಬರೆಯಲು ಮತ್ತು ಉಪನ್ಯಾಸಗಳನ್ನು ನೀಡಲು ಪ್ರಾರಂಭಿಸಿದೆವು. ಹೀಗಾಗಿ ನಾನು ನಿಜವಾಗಿಯೂ ನಿನ್ನ ಬಗ್ಗೆ ತಲೆ ಕೆಡಿಸಿಕೊಂಡೆ. ಆದುದರಿಂದಲೇ ನಿನ್ನ ಉಪನ್ಯಾಸಗಳ ಪ್ರವಾಸ ಮುಗಿದ ನಂತರ, ಸಾಧುವು ಹೇಗೆ ಜೀವನ ನಡೆಸಬೇಕೆಂಬುದನ್ನು ನೀನು ನೋಡಿದಂತಾಗಲಿ ಎಂಬ ಉದ್ದೇಶದಿಂದ ನನ್ನೊಡನೆ ಇರಲು ಹೇಳಿದೆ. ನಿನ್ನನ್ನು ನನ್ನ ಸೇವಕರಲ್ಲೊಬ್ಬನನ್ನಾಗಿ ಏಕೆ ಮಾಡಿದೆನೆಂಬುದು ಬನಾರಸ್‌ನಲ್ಲಿ ನಿನಗೆ ಅರ್ಥವಾಗಲಿಲ್ಲವೆಂಬುದು, ನನಗೆ ಇಂದು, ಖಾತರಿಯಾಗಿದೆ." ಈ ಮಾತುಗಳ ಮೂಲಕ ವ್ಯಕ್ತವಾಗುತ್ತಿದ್ದ ಅವರ ಅನುಕಂಪೆ ನನ್ನ ಮನಸ್ಸನ್ನು ಕರಗಿಸಿತು. ಇಂದಿಗೂ ಕೂಡ ಆ ಘಟನೆಯನ್ನು ನೆನೆಸಿಕೊಂಡರೆ ನನ್ನ ಕಣ್ಣುಗಳು ತುಂಬಿಬರುತ್ತವೆ.

ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ನಂತರ ಸ್ವಾಮಿ ಮಾಧವಾನಂದರು, ಹಿಂದೆ ಭರವಸೆ ಕೊಟ್ಟಿದ್ದಂತೆ, ರಾಜ್‌ಕೋಟ್ ಆಶ್ರಮದ ಜವಾಬ್ದಾರಿಯನ್ನು ಸ್ವೀಕರಿಸಲು ನನ್ನನ್ನು ಕೊಲ್ಕತಾಗೆ ಬರುವಂತೆ ತಿಳಿಸಿ ಸ್ವಾಮಿ ಶಾರದಾನಂದರಿಗೆ ಬರೆದರು. ಸ್ವಾಮಿಗಳು ಆ ಪತ್ರವನ್ನು ನನಗೆ ತೋರಿಸಿ, ನನ್ನ ಅಭಿಪ್ರಾಯ ಕೇಳಿದರು. ನಾನು ಇನ್ನೂ ಸ್ವಲ್ಪ ಕಾಲ ಅವರೊಂದಿಗೆ ಇರಬೇಕೆಂಬುದು ಅವರ ಇಚ್ಛೆ ಎಂದು ನನಗನ್ನಿಸಿತು. ಇಲ್ಲದಿದ್ದರೆ, ಅವರು ನನಗೆ ನೇರವಾಗಿ ರಾಜ್‌ಕೋಟ್‌ಗೆ ಹೋಗುವಂತೆ ಹೇಳಿಬಿಡುತ್ತಿದ್ದರು. ನಾನು ಅವರಿಗೆ ಹೇಳಿದೆ: "ನಾನು ನಿಜವಾಗಿಯೂ ನಿಮ್ಮೊಂದಿಗೆ ಇರಲು ಇಷ್ಟಪಡುವೆ. ಆದರೆ ನೀವು ಆಜ್ಞಾಪಿಸಿದರೆ, ಕೊಲ್ಕತಾಗೆ ಹಿಂತಿರುಗುವೆ." ನಾನು ಅವರೊಂದಿಗೆ ಇರಲು ಬಯಸುವುದಾಗಿ ಸ್ವಾಮಿ ಮಾಧವಾನಂದರಿಗೆ ಬರೆಯಲು ಸ್ವಾಮಿಗಳು ನನಗೆ ಹೇಳಿದರು. ಇದು ಮೂಲತಃ ಸ್ವಾಮಿ ಶಾರದಾನಂದರ ಇಚ್ಛೆಯಲ್ಲ, ಅದು ನನ್ನ ಬಯಕೆ ಇರಬೇಕು ಎಂದು ಸ್ವಾಮಿ ಮಾಧವಾನಂದರಿಗೆ ತೋರಿತು. ಅದರಿಂದ ಅವರಿಗೆ ಬೇಸರವಾಯಿತು. ನಿಮ್ಮ ಇಚ್ಛೆ ಏನಿದೆ ಎಂದು ಸ್ವತಃ ಬರೆದು ತಿಳಿಸಿ ಎಂದು ಶಾರದಾನಂದರನ್ನು ಮಾಧವಾನಂದರು ಕೇಳಿಕೊಂಡರು. ನಾನು ರಾಜ್‌ಕೋಟ್‌ಗೆ ಹೋಗಲೇಬೇಕಾದ ಅವಶ್ಯಕತೆಯೇನೂ ತಮಗೆ ಕಾಣಿಸುತ್ತಿಲ್ಲವೆಂದು ಅವರು ಉತ್ತರಿಸಿದರು. ಅನೇಕ ವರ್ಷಗಳ ಹಿಂದೆ ಶಾರದಾನಂದರು ಆ ಸ್ಥಳಕ್ಕೆ ಭೇಟಿಯಿತ್ತಿದ್ದರು. ಅಲ್ಲಿಯ ಜನರಿಗೆ ಇಂಗ್ಲಿಷ್‌ನಲ್ಲಿ ಭಾಷಣ ಮಾಡುವ ಸ್ವಾಮಿಗಳ ಅವಶ್ಯಕತೆ ಏನೂ ಇರಲಿಲ್ಲ. ಅಲ್ಲಿಗೆ ಹೋಗುವ ಬದಲು ತಮ್ಮೊಂದಿಗೆ ನಾನು ಉಳಿಯುವುದೇ ಸರಿ ಎಂದು ಅವರಿಗೆ ಅನ್ನಿಸಿತ್ತು. ಗುರು ಮಹಾರಾಜರ ಒಬ್ಬರು ಪ್ರತ್ಯಕ್ಷ ಶಿಷ್ಯರೊಂದಿಗೆ ಸ್ವಲ್ಪ ಕಾಲ ಇರಬೇಕೆಂಬ ನನ್ನ ಅಂತರಾಳದ ಆಸೆಯನ್ನು ಸ್ವಾಮಿ ಶಾರದಾನಂದರು ಹೀಗೆ ಪೂರೈಸಿದರು ಎನ್ನುವುದು ನನಗೆ ಈಗ ಮನವರಿಕೆಯಾಗಿದೆ.

ಮತ್ತೊಂದು ಘಟನೆಯೊಂದಿಗೆ ಈ ನೆನಪುಗಳನ್ನು ಮುಗಿ

ಸಲು ಇಚ್ಛಿಸುತ್ತೇನೆ. 'ರಾಮಕೃಷ್ಣ ಲೀಲಾಪ್ರಸಂಗ' ದ ಕೊನೆಯಲ್ಲಿ ಬರುವ ಕಾಶೀಪುರದ ವೃತ್ತಾಂತದ ಅಧ್ಯಾಯವನ್ನು ಪೂರ್ಣ ಗೊಳಿಸಬೇಕೆಂದು, ಬನಾರಸ್‌ಗೆ ಹೊರಡುವ ಮುನ್ನವೇ, ಸ್ವಾಮಿ ಶುದ್ಧಾನಂದರು ಸ್ವಾಮಿ ಶಾರದಾನಂದರನ್ನು, ನನ್ನ ಮುಂದೆಯೇ ಕೇಳಿಕೊಂಡಿದ್ದರು. ತಮ್ಮ ಬಳಿ ಕೆಲವು ಟಿಪ್ಪಣಿಗಳು ಇರುವುದಾಗಿಯೂ ಆದರೆ ತಮಗೆ ಬರೆಯುವಷ್ಟು ಆರೋಗ್ಯ ಇಲ್ಲವೆಂದೂ ಸ್ವಾಮಿಗಳು ಹೇಳಿದರು. ಆಗ ಸ್ವಾಮಿ ಶುದ್ಧಾನಂದರು ಹೇಳಿದರು: "ನೀವು ಹೇಳತೊಡಗಿದರೆ ನಿಖಿಲಾನಂದ ಅದನ್ನು ಬರೆದುಕೊಳ್ಳುವನು" ಎಂದು. ಏನು ಮಾಡಲು ಸಾಧ್ಯವೊ ನೋಡೋಣವೆಂದು ಸ್ವಾಮಿಗಳು ಆಗ ಹೇಳಿದ್ದರು. ತಮ್ಮ ಟಿಪ್ಪಣಿ ಪುಸ್ತಕವನ್ನು ತಮ್ಮೊಡನೆ ತೆಗೆದುಕೊಂಡರೆಂದು ಕಾಣುತ್ತದೆ. ಆದರೆ, ಆಗಲೆ ತಿಳಿಸಿದಂತೆ, ಬನಾರಸ್‌ನಲ್ಲಿ ಅವರ ಆರೋಗ್ಯ ಚೆನ್ನಾಗಿಲ್ಲದೆ, ಬರವಣಿಗೆ ನಡೆಯಲಿಲ್ಲ. ನಾನು ಪುರಿಗೆ ಹೊರಟಾಗ ಸ್ವಾಮಿ ಶುದ್ಧಾನಂದರು ಲೇಖನದ ಬಗ್ಗೆ ಅವರಿಗೆ ಮತ್ತೆ ನೆನಪು ಮಾಡಿದರು. ಸ್ವಾಮಿಗಳು ಹೇಳಿದ್ದನ್ನು ಸಂಪೂರ್ಣ ವಾಗಿ ಬರೆದುಕೊಳ್ಳಲು ನನಗೆ ಹೇಳಿದರು. ಆಗ ಸ್ವಾಮಿಗಳು ಮುಖ್ಯವಾದ ಈ ಮಾತುಗಳನ್ನು ಹೇಳಿದರು: "ಶ್ರೀಮಾತೆಯವರು ಇದ್ದಾಗ ನನ್ನಲ್ಲಿ ಅಂತಃಶಕ್ತಿಯ ಅನುಭವ ಬಹಳವಾಗಿ ಇರುತ್ತಿತ್ತು. ಆದ್ದರಿಂದಲೇ 'ಲೀಲಾಪ್ರಸಂಗ'ವನ್ನು ಬರೆಯಲು ಪ್ರಾರಂಭಿಸಿದೆನು. ಅವರು ಕಾಲವಾದ ಮೇಲೆ ನನ್ನ ಎಲ್ಲಾ ಶಕ್ತಿಯೂ ಉಡುಗಿ ಹೋದಂತಾಯಿತು. ನಂತರ ಸ್ವಾಮಿ ಬ್ರಹ್ಮಾನಂದರನ್ನು ನೋಡಿ ನನಗೆ ಮತ್ತೆ ಶಕ್ತಿ ಬಂದಂತಾಯಿತು. ಆದರೆ, ಅವರೂ ಕಾಲ ವಾದಾಗ ನನ್ನ ಬುದ್ಧಿ, ಆಲೋಚನಾ ಸಾಮರ್ಥ್ಯವನ್ನೇ ಕಳೆದು ಕೊಂಡಂತೆ ಆಗಿದೆ. ಹೀಗಾಗಿ ಪುಸ್ತಕವನ್ನು ಮುಗಿಸಲು ಇನ್ನು ನನ್ನಿಂದ ಸಾಧ್ಯವಿಲ್ಲ." ನಂತರ ಅವರು ಹೇಳಿದರು: " 'ಲೀಲಾ ಪ್ರಸಂಗ' ವನ್ನು ಬರೆಯಲು ಪ್ರಾರಂಭಿಸಿದಾಗ, ಗುರುಮಹಾ ರಾಜರನ್ನು ಅರ್ಥಮಾಡಿಕೊಂಡಿರುವೆನೆಂದು ನಾನು ಭಾವಿಸಿದ್ದೆ. ಆದರೆ, ಈಗ ಗುರುಮಹಾರಾಜರ ಜೀವನ ಬಹಳ ಗಹನವೆಂದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ. ಆಗ ನಾನು ಕೇವಲ ಮೇಲಿನ ಕೊಂಬೆಗಳ ಮೇಲೆ ಹಾರಾಡುತ್ತಿದ್ದೆ; ಆದರೆ ಅದರ ಬೇರು ಭೂಮಿಯ ಅಂತರಾಳದಲ್ಲಿರುವುದು."

ಸ್ವಾಮಿ ಶಾರದಾನಂದರಿಗೆ ಸಂಬಂಧಿಸಿದ ಇತರ ಅನೇಕ ಘಟನೆಗಳು ಇವೆ. ಅವರ ಬೋಧನೆಗಳನ್ನು ಸಣ್ಣ ಪ್ರಮಾಣ ದಲ್ಲಿ ನನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದ್ದರೂ ನಾನು ಈಗಿರುವುದಕ್ಕಿಂತ ಅತ್ಯಂತ ವಿಭಿನ್ನ ವ್ಯಕ್ತಿಯಾಗಿರುತ್ತಿದ್ದೆ.

ಸ್ವಾಮಿ ವಿವೇಕಾನಂದರಲ್ಲಿ ಮತ್ತು ರಾಮಕೃಷ್ಣ ಸಂಘದಲ್ಲಿ ಸ್ವಾಮಿ ಶಾರದಾನಂದರಿಗೆ ಅಸದೃಶ ನಿಷ್ಠೆ ಮತ್ತು ಭಕ್ತಿ ಇತ್ತು. ವಿವೇಕಾನಂದರು ಕಾಲವಾದ ಮೇಲೆ ಬೇಲೂರು ಮಠದ ಅನೇಕ ಸಂನ್ಯಾಸಿಗಳು ಹತಾಶರಾಗಿ ವಿಶ್ರಾಂತ ಜೀವನ ನಡೆಸಲು ಬಯಸಿದ್ದರೆಂದು, ಒಂದು ದಿನ ಅವರ ಬಾಯಿಂದ ನಾನು ಕೇಳಿರುವ ಶಾರದಾನಂದರು ಸಂನ್ಯಾಸಿಗಳ ಒಂದು ಸಭೆ ಯನ್ನು ಕರೆದು ರಾಮಕೃಷ್ಣ ಸಂಘವು ನಿರ್ವಹಿಸಬೇಕಾದ ಗುರುತರ ಜವಾಬ್ದಾರಿಯನ್ನು ಕುರಿತು ಅವರಿಗೆ ತಿಳಿಸಿದರು. ಸ್ವಾಮಿಜಿ ಸ್ವತಃ ತಮ್ಮನ್ನು ಸಂಘದ ಕಾರ್ಯದರ್ಶಿಯೆಂದು ಆರಿಸಿದ್ದಾರೆ. ಹೀಗಾಗಿ ತಮಗೆ, ಕೆಲಸಕಾರ್ಯಗಳಲ್ಲಿ ಸಹಾಯ ಮಾಡಲು ಮುಂದೆ ಬರುವವರು ಯಾರಿದ್ದೀರಿ, ಅದಲ್ಲದೆ, ಧ್ಯಾನಜೀವನ ವನ್ನು ನಡೆಸಲು ಇಚ್ಛಿಸುವವರು ಎಷ್ಟು ಜನರು ಎಂದು ನೆರೆದಿದ್ದ ಸಂನ್ಯಾಸಿಗಳನ್ನು ಅವರು ಕೇಳಿದರು. ನಂತರ, ಸಂಘದ ಕೆಲಸವನ್ನು ಇನ್ನೂ ಐದು ವರ್ಷಗಳ ಕಾಲ ಮುಂದುವರಿಸಿ ಕೊಂಡು ಹೋಗಲು ತಾವೇ ಮುಂದಾದರು. ಒಬ್ಬರನ್ನು ಹೊರತುಪಡಿಸಿ ಸಂಘದ ಸಂನ್ಯಾಸಿಗಳೆಲ್ಲರೂ, ಅವರೊಂದಿಗೆ ಸಹಕರಿಸಲು ಒಪ್ಪಿದರು. ಐದು ವರ್ಷಗಳ ನಂತರ ಸ್ವಾಮಿ ಶಾರದಾನಂದರು, ಕಾರ್ಯದರ್ಶಿಯ ಸ್ಥಾನವನ್ನು ಬಿಟ್ಟು ಬಿಡಲಿಲ್ಲ. ಬೇಲೂರು ಮಠದಲ್ಲಿ ೧೯೨೬ರಲ್ಲಿ ನಡೆದ ಸಾಧುಗಳ ಪ್ರಥಮ ಸಮ್ಮೇಳನದ ನಂತರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು ಮತ್ತು ಸಮರ್ಥರಾದ ಸ್ವಾಮಿಗಳಿಗೆ ವಿವಿಧ ಜವಾಬ್ದಾರಿಗಳನ್ನು ವಹಿಸಲಾಯಿತು. ಸ್ವಾಮಿ ವಿವೇಕಾನಂದರೇ ತಮ್ಮನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಕಾರ್ಯದರ್ಶಿ ಗಳನ್ನಾಗಿ ಮಾಡಿದರೆಂದೂ ತಾವು ಬದುಕಿರುವವರೆಗೂ ಆ ಸ್ಥಾನದಲ್ಲೇ ಇರುವುದಾಗಿಯೂ ಸ್ವಾಮಿ ಶಾರದಾನಂದರು ಹೇಳಿದುದನ್ನು ನಾನು ಕೇಳಿದ್ದೇನೆ. ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ಕರ್ತವ್ಯಗಳನ್ನು ಕ್ರಿಯಾಶೀಲರಾಗಿ ಪಾಲಿಸ ಬೇಕೆಂದೂ, ತಾವು ನೆಪಮಾತ್ರಕ್ಕೆ ಕಾರ್ಯದರ್ಶಿಯಾಗಿರು ವುದಾಗಿಯೂ ಅವರು ಆಗ ಹೇಳಿದರು. ಆಗಲೇ ಅವರ ಆರೋಗ್ಯ ಮತ್ತು ದೇಹಬಲ ಕುಂದುತ್ತಿತ್ತು. ಆದರೂ ಅವರು ತಮ್ಮ ಮಾತಿನಂತೆ ನಡೆದುಕೊಂಡರು.

ಸ್ವಾಮಿ ಶಾರದಾನಂದರ ಆಧ್ಯಾತ್ಮಿಕ ಭಾವದ ಬಗ್ಗೆ ಏನನ್ನಾ ದರೂ ಬರೆಯುವುದು ನನ್ನ ಪಾಲಿಗೆ ಉದ್ಧಟತನವಾಗುತ್ತದೆ. ನಾನು ಕೇಳಿರುವಂತೆ ಅವರು ಎಂದೂ ತಮ್ಮ ಆಧ್ಯಾತ್ಮಿಕ ಅನುಭವಗಳ ಬಗ್ಗೆ ಮಾತನಾಡುತ್ತಿರಲಿಲ್ಲ. ಸೂಕ್ಷ್ಮಗ್ರಾಹಿಗಳ ಕಣ್ಣಿಗೆ ಮಾತ್ರ ದೈವೀ ಪುರುಷರ ವ್ಯಕ್ತಿತ್ವದ ಆಳ ಕಾಣುವುದು. ಸಾಧಾರಣ ವ್ಯಕ್ತಿಗಳೂ ಕೂಡ ಶಾರದಾನಂದರ ನಿತ್ಯಚರ್ಯೆಯಲ್ಲಿ ಅವರ **ಅನಂತ ತಾಳ್ಮೆ, ಸಹನೆ ಬೆರೆತ ಕ್ರಿಯಾಶೀಲತೆ, ಎಣೆಯಿಲ್ಲದ ಕಾರುಣ್ಯ, ಮಾನವ ಸ್ವಭಾವದ ಆಳವಾದ ಪರಿಜ್ಞಾನ, ದಂಭಾಚಾರ ರಾಹಿತ್ಯ, ಶಿಶುಸದೃಶ ಮುಗ್ಧತೆ ಮತ್ತು ಎಂದೂ ತಪ್ಪದ ಶಿಷ್ಟಾಚಾರ ಗಳನ್ನು ಕಾಣಬಹುದಿತ್ತು.** ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳ ಕರ್ತವ್ಯಭಾರವನ್ನು ಸಂಪೂರ್ಣ ನಿರಹಂಕಾರದಿಂದ ಅವರು ನಿರ್ವಹಿಸಿದರು. ಅಂತಹ ಜವಾಬ್ದಾರಿಯ ಹುದ್ದೆಯನ್ನು

ಅಲಂಕರಿಸಿದ್ದ ಅವರಿಗೆ ನಾನಾ ಸಮಸ್ಯೆಗಳು ಪ್ರತಿದಿನವೂ ಎದುರಾಗುತ್ತಿದ್ದುವು. ಅವುಗಳನ್ನು ಜಾಣ್ಮೆ ಮತ್ತು ಧೈರ್ಯದಿಂದ ಅವರು ಎದುರಿಸಿದರು. ಇದರ ಜೊತೆ ಶ್ರೀಮಾತೆಯವರನ್ನು ಬೇರೆ ಅವರು ನೋಡಿಕೊಳ್ಳಬೇಕಾಗಿತ್ತು. ಶ್ರೀಮಾತೆಯವರು ಅನೇಕ ವಿಷಯಗಳಲ್ಲಿ ಇವರನ್ನೇ ಅವಲಂಬಿಸಿದ್ದರು. ಅಲ್ಲದೆ, ಶ್ರೀಮಾತೆಯವರೊಂದಿಗೆ ಇರುತ್ತಿದ್ದ ವಿಚಿತ್ರ ವರ್ತನೆಯ ಅವರ ಬಂಧುಗಳನ್ನೂ ನೋಡಿಕೊಳ್ಳಬೇಕಿತ್ತು. ಬಹುಶಃ ಅಲೆಗಳಾದ ಮೇಲೆ ಅಲೆಗಳಂತೆ ಕಷ್ಟ ಪರಂಪರೆಗಳು ಇವರ ಮೇಲೆ ಹಾದು ಹೋಗಿರಬೇಕು, ಆದರೆ ಇವರು ಯಾವುದರಿಂದಲೂ ವಿಚಲಿತ ರಾಗದೆ ಸ್ಥಿರವಾಗಿದ್ದರು. ನಾನು ಸ್ವಾಮಿ ಶಾರದಾನಂದರನ್ನು ಕುರಿತು ಯೋಚಿಸಿದಾಗಲೆಲ್ಲಾ ಭಗವದ್ಗೀತೆಯ ಈ ಶ್ಲೋಕ ನನಗೆ ನೆನಪಾಗುವುದು:

**ಆಪೂರ್ಯಮಾಣಮಚಲಪ್ರತಿಷ್ಠಂ**
**ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।**
**ತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ**
**ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥** (೨. ೭೦)

**ಪೂರ್ಣ ಹಾಗೂ ಅಚಲವಾಗಿರುವ ಇರುವ ಸಮುದ್ರ ಅದಕ್ಕೆ ಪ್ರವೇಶಿಸುವ ನದಿಗಳ ನೀರಿನಿಂದ ಕ್ಷೋಭೆಗೊಳ್ಳುವುದಿಲ್ಲ. ಹಾಗೆಯೇ ಎಲ್ಲ ಕಾಮಗಳು ಯಾರನ್ನು ಪ್ರವೇಶಿಸಿಯೂ ಅವನನ್ನು ಕ್ಷೋಭೆಗೊಳಿಸಲಾರವೋ, ಅವನು ಶಾಂತಿಯನ್ನು ಹೊಂದುತ್ತಾನೆ; ಅದಕ್ಕೆ ಬದಲಾಗಿ ಕಾಮಗಳನ್ನು ಬಯಸುವವನು ಶಾಂತಿಯನ್ನು ಹೊಂದಲಾರನು.**

ಸ್ವಾಮಿ ಶಾರದಾನಂದರು ಅಪೋಪ್ಲೆಕ್ಸಿ (ತೀಕ್ಷ್ಣವಾಯು ವ್ಯಾಧಿ) ಯಿಂದ ಬಾಧಿತರಾಗಿದ್ದಾರೆಂಬ ದುಃಖದ ಸುದ್ದಿ, ನನಗೆ ಟೆಲಿಗ್ರಾಂ ಮೂಲಕ ಗೊತ್ತಾಯಿತು. ನಾನು ಕೊಲ್ಕತಾಗೆ ಧಾವಿಸಿ 'ಉದ್ಬೋಧನ' ಕ್ಕೆ ಹೋದೆ. ಅವರ ದೇಹದ ಒಂದು ಬದಿ ಸಂಪೂರ್ಣವಾಗಿ ಸ್ವಾಧೀನ ತಪ್ಪಿತ್ತು. ಆದರೆ ಅವರ ಅಂತಃಪ್ರಜ್ಞೆ ಬಾಧಿತವಾಗಿರಲಿಲ್ಲ. ಅವರು ಮಹಾಸಮಾಧಿ ಹೊಂದಿದ ಬೆಳಗ್ಗೆ, ಇಬ್ಬರು ಸೇವಕರು ಅವರ ಹಾಸಿಗೆಯ ಬಟ್ಟೆಯನ್ನು ಬದಲಾಯಿಸುತ್ತಿದ್ದರು. ಸ್ವಾಮಿ ಶಾರದಾನಂದರು ಪಕ್ಕಕ್ಕೆ ಹೊರಳಿಕೊಳ್ಳದಂತೆ ಹಿಡಿದುಕೊಳ್ಳಲು, ಮೂರನೆಯವರೊಬ್ಬರ ಸಹಾಯ ಅವರಿಗೆ ಬೇಕಿತ್ತು. ನನಗೆ ಸಹಾಯ ಮಾಡುವಂತೆ ಸೇವಕರು ಹೇಳಿದರು. ನಾನು ಹಾಸಿಗೆಯ ಅಂಚಿನಲ್ಲಿ ಕುಳಿತೆ. ಸ್ವಾಮಿಗಳ ಶರೀರವನ್ನು ಒಂದು ಪಕ್ಕಕ್ಕೆ ಹೊರಳಿಸಲಾಯಿತು. ಸೇವಕರು ಬಟ್ಟೆಯನ್ನು ಹಾಸುತ್ತಿರುವಾಗ ಸ್ವಾಮಿಗಳು ಹಿಂದಕ್ಕೆ ಹೊರಳದಂತೆ ಅದೇ ಸ್ಥಿತಿಯಲ್ಲಿ ಅವರನ್ನು ಹಿಡಿದುಕೊಂಡೆ. ಇದ್ದಕ್ಕಿದ್ದಂತೆ ಅವರು ನನಗೆ ವಿಶೇಷವಾದ ಆಶೀರ್ವಾದವನ್ನು ಕರುಣಿಸಿದಂತೆ ಭಾಸವಾಯಿತು. ಅದು ತೀರಾ ವೈಯಕ್ತಿಕ ಅನುಭವವಾದ್ದರಿಂದ ಇಲ್ಲಿ ವಿವರಿಸುವುದು ಸಾಧುವಲ್ಲ.

**ಆಧಾರ ಗ್ರಂಥ:** "Glimpses of a Great Soul"
by *Swami Asheshananda*,



***'ಇಲ್ಲಿರುವ ಎಲ್ಲ ಕೆಲಸಗಳೂ ಪವಿತ್ರ'***

ಪ್ರೇಮಾನಂದರು ಸಂನ್ಯಾಸಿಗಳಿಗೆ ದಿನನಿತ್ಯದ ಜೀವನದಲ್ಲಿ ಕೆಲಸ ಹಾಗೂ ಉಪಾಸನೆಗಳನ್ನು ಹೇಗೆ ಒಗ್ಗೂಡಿಸಬೇಕು ಎಂಬ ಅನುಷ್ಠಾನ ವೇದಾಂತವನ್ನು ಹೇಳಿಕೊಡುತ್ತಿದ್ದರು. ಯಾವುದನ್ನೂ ವ್ಯರ್ಥವಾಗಲು ಬಿಡಬಾರದು ಎನ್ನುವ ಪಾಠವನ್ನು ಹೊಸ ಬ್ರಹ್ಮಚಾರಿಗಳಿಗೆ ಮೊದಲು ಮನದಟ್ಟು ಮಾಡುವರು. ಸಂನ್ಯಾಸಿಗಳ ಜೊತೆ ಸೇರಿ ಅವರು ಮಠದ ಅಂಗಳದಲ್ಲಿನ ಕಳೆ ತೆಗೆಯುವುದು, ಹಸುಗಳಿಗಾಗಿ ಹುಲ್ಲು ಕತ್ತರಿಸುವುದು, ಸೆಗಣಿ ಒಟ್ಟುಮಾಡಿ ಬೆರಣಿ ತಟ್ಟುವುದು– ಎಲ್ಲವನ್ನೂ ಮಾಡುತ್ತಿದ್ದರು; ಬರಿದೇ ಆಜ್ಞೆ ನೀಡುತ್ತಿರಲಿಲ್ಲ. ಅವರು ಹೀಗೆ ಅನ್ನುತ್ತಿದ್ದರು:

'ಇಲ್ಲಿರುವ ಎಲ್ಲ ಕೆಲಸಗಳೂ ಪವಿತ್ರ – ತರಕಾರಿ ಕತ್ತರಿಸುವುದು, ಬೆರಣಿ ತಟ್ಟುವುದು, ಉಪನ್ಯಾಸ ನೀಡುವುದು, ದೇವರ ಪೂಜೆ ಮಾಡುವುದು – ಎಲ್ಲವೂ ದೇವರ ಸೇವೆಯೇ. ಹೃದಯದಲ್ಲಿ ಒಂದೇ ರೀತಿಯ ಭಕ್ತಿಭಾವವನ್ನು ಇಟ್ಟುಕೊಂಡು ಎಲ್ಲ ಕೆಲಸಗಳನ್ನೂ ಮಾಡುವುದನ್ನು ನೀವು ಕಲಿಯಬೇಕು.'

(ಸ್ವಾಮಿ ಪ್ರೇಮಾನಂದರ ಜಯಂತಿ ಡಿಸೆಂಬರ್ 18ರಂದು)

## ಮಂಗಳೂರು ರಾಮಕೃಷ್ಣ ಮಠದ ವಾರ್ಷಿಕೋತ್ಸವ

**21.12.2007ರಿಂದ 23.12.2007 ರವರೆಗೆ** ***ಪ್ರತಿದಿನ ಸಂಜೆ 4.45 ರಿಂದ 7.30ರವರೆಗೆ ಭಜನೆ, ಎರಡು ಪ್ರವಚನಗಳು***

**21.12.2007 :ಶ್ರೀಮಾತೆ ಶಾರದಾದೇವಿ ದಿನೋತ್ಸವ:** *ಪ್ರವಚನಗಳು:*
ಶ್ರೀಮತಿ ವಿಜಯಭಾರತಿ: *ಶ್ರೀಮಾತೆಯವರ ಅವತರಣ ವಿಶೇಷತೆ*
ಸ್ವಾಮಿ ನಿತ್ಯಸ್ಥಾನಂದಜಿ: *ಕ್ಷಮಾಮಯಿ ಶಾರದಾಮಾಯಿ*

**22.12.2007 : ಸ್ವಾಮಿ ವಿವೇಕಾನಂದ ದಿನೋತ್ಸವ:** *ಪ್ರವಚನಗಳು:*
ಡಾ.ಹೆಚ್.ಎನ್.ಮುರುಳೀಧರ : *ವಿವೇಕಾನಂದರ ವಿಚಾರ ಮೀಮಾಂಸೆ*
ಸ್ವಾಮಿ ಸ್ವಾತ್ಮಾರಾಮಾನಂದಜಿ : *ವಿವೇಕಾನಂದ ಹಾಗೂ ಶ್ರದ್ಧೆ*

**23.12.2007: ಭಗವಾನ್‌ಶ್ರೀರಾಮಕೃಷ್ಣ ದಿನೋತ್ಸವ:** *ಪ್ರವಚನಗಳು:*
ಡಾ.ಹೆಚ್.ಎನ್.ಮುರುಳೀಧರ : *ನವಯುಗಭಾಷ್ಯ–ಶ್ರೀರಾಮಕೃಷ್ಣ*
ಸ್ವಾಮಿ ನಿತ್ಯಸ್ಥಾನಂದಜಿ : *ಶ್ರೀರಾಮಕೃಷ್ಣರು ಮತ್ತು ಸತ್ಯಯುಗ*

**24.12.2007: ಸಾಂಸ್ಕೃತಿಕ ಕಾರ್ಯಕ್ರಮಗಳು –ಸಂಜೆ 4.45–7.30**
**ಶ್ರೀರಾಮಕೃಷ್ಣ ಬಾಲಕಾಶ್ರಮದ ವಿದ್ಯಾರ್ಥಿಗಳಿಂದ**

**25.12.2007: ಯಕ್ಷಗಾನ: ಗದಾಯುದ್ಧ – ಸಂಜೆ 5.00–7.30**
**ಚಿಟ್ಟಾಣಿ ರಾಮಚಂದ್ರ ಹೆಗಡೆ ಮತ್ತು ಬಳಗ**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:** *ರಾಮಕೃಷ್ಣ ಮಠ, ಮಂಗಳಾದೇವಿ ರಸ್ತೆ, ಮಂಗಳೂರು 575 001* ; **ಫೋನ್: 0824–2414412/2419097/9972526580**

ಎಲ್ಲರಿಗೂ ಆದರದ ಸುಸ್ವಾಗತ